# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

**ಶಾಸನಬದ್ಧ ಸಂಸ್ಥೆ**

ನಿರ್ಮಾಣ ಭವನ, ಡಾ. ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010.

www.souharda.coop, Ph: 080-23378375-80, E-mail souharda@souharda.coop


ಸಂಖ್ಯೆ : ಸಂಸ/ಶಿವಿ/ತ-6/1/2019-20 ದಿನಾಂಕ: 18.10.2019

ಇವರಿಗೆ:
ಮಾನ್ಯ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರು
ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳು

ಮಾನ್ಯರೇ,

**ವಿಷಯ:** ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಪದಾಧಿಕಾರಿಗಳು ಹಾಗೂ ವೃತ್ತಿಪರ ನಿರ್ದೇಶಕರಿಗಾಗಿ **"ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ಕಾರ್ಯಾಗಾರ"** (Managerial Excellance Training) ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಅವಗಾಹನೆಗೆ ತರಬಯಸುವುದೇನೆಂದರೆ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು, ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಶಾಸನಬದ್ಧವಾಗಿ ರಚನೆಗೊಂಡು, ಅರೆನ್ಯಾಯಿಕ ಅಧಿಕಾರ(Quasi Judicial)ವನ್ನು ಹೊಂದಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳ ಮಾತೃ ಸಂಸ್ಥೆಯಾಗಿದೆ. ಈ ಕಾಯ್ದೆಯಡಿಯಲ್ಲಿ 18 ಪಟ್ಟಣ ಸಹಕಾರ ಬ್ಯಾಂಕುಗಳು ಸೇರಿದಂತೆ 4750 ಸೌಹಾರ್ದ ಸಹಕಾರಿಗಳು ಕಾರ್ಯ ನಿರ್ವಹಿಸುತ್ತಿವೆ. ರಾಜ್ಯದ ಸಹಕಾರಿ ಕ್ಷೇತ್ರಕ್ಕೆ ಒಂದು ಹೊಸ ಚೈತನ್ಯವನ್ನು ನೀಡಿರುವ ಕ್ಷೇತ್ರ ಇದಾಗಿದೆ. ಈ ಸೌಹಾರ್ದ ಸಹಕಾರಿಗಳ ಮಾತೃ ಸಂಸ್ಥೆಯಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಕಾರ್ಯನಿರ್ವಹಿಸುತ್ತಿದ್ದು, ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಪೂರಕವಾಗುವಂತಹ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳುತ್ತ ಬಂದಿದೆ.

ಸಹಕಾರ ಕ್ಷೇತ್ರದಲ್ಲಿ ಕ್ರಿಯಾಶೀಲ ಉತ್ತಮ ಅಧ್ಯಕ್ಷರಾಗಿ, ನಿರ್ದೇಶಕರಾಗಿ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ಬ್ಯಾಂಕಿಂಗ್ ಕ್ಷೇತ್ರದ ಪ್ರಚಲಿತ ವಿದ್ಯಮಾನ ಮಾಹಿತಿಯನ್ನು ಒದಗಿಸುವ ಉದ್ದೇಶದಿಂದ ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕ್‌ಗಳ ಪದಾಧಿಕಾರಿಗಳು /ವೃತ್ತಿಪರ ನಿರ್ದೇಶಕರುಗಳಿಗಾಗಿ/ ನಿರ್ದೇಶಕರುಗಳಿಗಾಗಿ ದಿನಾಂಕ 6 ಮತ್ತು 7ನೇ ನವೆಂಬರ್ 2019ರಂದು **"ಆಡಳಿತ ಪರಿಣಿತಿ ಅಭಿವೃದ್ಧಿ"** ತರಬೇತಿ ಕಾರ್ಯಾಗಾರವನ್ನು ನಡೆಸಲು ಉದ್ದೇಶಿಸಿದೆ. ಈ ತರಬೇತಿ ಕಾರ್ಯಕ್ರಮವನ್ನು **ಅಂಕಿತ ವಿಸ್ತಾ ಗ್ರೀನ್ ವಿಲೇಜ್, ನೆಲಮಂಗಲ, ಬೆಂಗಳೂರು** ಇಲ್ಲಿ ಹಮ್ಮಿಕೊಳ್ಳಲಾಗಿದೆ. ಪ್ರತಿನಿಧಿಗಳು ಬೆಳಿಗ್ಗೆ 8.00ಕ್ಕೆ ನೋಂದಾವಣಿ ಮಾಡಿಕೊಳ್ಳಲು ಕೋರಿದೆ. ಈ ತರಬೇತಿ ಕಾರ್ಯಾಗಾರದಲ್ಲಿ ಅಳವಡಿಸಬಹುದಾದ **ಆಡಳಿತ ಪರಿಣಿತಿ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳ ಬಗ್ಗೆ ತಮ್ಮ ಅಭಿಪ್ರಾಯ/ಸಲಹೆಯನ್ನು ಅಪೇಕ್ಷಿಸಿದ್ದು, ದಿನಾಂಕ 25.10.2019ರೊಳಗೆ ಸಂಯುಕ್ತ** ಸಹಕಾರಿಯ **email-kssfcltrg@souharda.coop ಈ ಐಡಿಗೆ ಕಳಿಹಿಸಲು ಈ ಮೂಲಕ ಕೋರಿದೆ.**

ತರಬೇತಿಯಲ್ಲಿ ಒಂದು ಬ್ಯಾಂಕಿನಿಂದ ಕನಿಷ್ಠ 2 ಜನ, ಗರಿಷ್ಠ 3 ಜನ ಭಾಗವಹಿಸಲು ಅವಕಾಶ ಇರುತ್ತದೆ. ತಮ್ಮ ಭಾಗವಹಿಸುವಿಕೆಯನ್ನು ಲಗತ್ತಿಸಿದ ನಮೂನೆಯಲ್ಲಿ ಭರ್ತಿ ಮಾಡಿ ದಿನಾಂಕ 30.10.2019ರೊಳಗೆ ಕಳುಹಿಸಲು ಹಾಗೂ ಈ ಕಾರ್ಯಕ್ರಮದಲ್ಲಿ ತಾವುಗಳು ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆದುಕೊಳ್ಳಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ತರಬೇತಿ ಅಧಿಕಾರಿಯಾದ ಶ್ರೀ ವಿ.ಜೆ.ಕಾರಕೂನ ಇವರಿಗೆ ತಿಳಿಸಲು ಕೋರಿದೆ.

**ವಂದನೆಗಳೊಂದಿಗೆ,**

ತಮ್ಮ ವಿಶ್ವಾಸಿ,

(ಶರಣಗೌಡ ಜಿ. ಪಾಟೀಲ್)
ವ್ಯವಸ್ಥಾಪಕ ನಿರ್ದೇಶಕರು

Karnataka State Souharda Federal Cooperative Ltd., Regd. No. RSR / SOU / ACT / 136 / Regn 051 / 2001-02 dated 04-01-2002 Bangalore

**ಲಗತ್ತು :** ಅರ್ಜಿ ನಮೂನೆ

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಂಸ್ಥೆ

"ನಿರ್ಮಾಣ ಭವನ", ಡಾ. ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 10

**Ph: 080-23378375-80 Website: www.souharda.coop, Email: souharda@souharda.coop**


## ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್‌ಗಳ ಪದಾಧಿಕಾರಿಗಳು ಹಾಗೂ ವೃತ್ತಿಪರ ನಿರ್ದೇಶಕರುಗಳಿಗಾಗಿ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ಕಾರ್ಯಕ್ರಮ

### ನೋಂದಣಿ ಪತ್ರ

ಬ್ಯಾಂಕಿನ ಹೆಸರು :

ಬ್ಯಾಂಕಿನ ವಿಳಾಸ :

ದೂರವಾಣಿ ಸಂಖ್ಯೆ :

ಸಂಯುಕ್ತ ಸಹಕಾರಿಯ ಸದಸ್ಯತ್ವ ಸಂಖ್ಯೆ :

| ಭಾಗವಹಿಸುವ ಪ್ರತಿನಿಧಿಯ ವಿವರ | |
|---|---|
| ➤ ಹೆಸರು :<br>➤ ದೂರವಾಣಿ ಸಂಖ್ಯೆ :<br>➤ ಇ-ಮೇಲ್ : | ➤ ಹುದ್ದೆ :<br>➤ ಜನ್ಮ ದಿನಾಂಕ :<br>➤ ವಿದ್ಯಾರ್ಹತೆ : |

- ತರಬೇತಿಯಲ್ಲಿ ಅಳವಡಿಸಬಹುದಾದ ವಿಷಯಗಳು :
- ಸಂಪನ್ಮೂಲ ವ್ಯಕ್ತಿಗಳು ಆಯ್ಕೆ :

ಸಂಯುಕ್ತ ಸಹಕಾರಿಯು ಆಯೋಜಿಸಿರುವ 2 ದಿನಗಳ ಆಡಳಿತ ಪರಿಣಿತಿ ತರಬೇತಿಯಲ್ಲಿ ಭಾಗವಹಿಸಲು ಇಚ್ಛಿಸಿರುತ್ತೇನೆ ಹಾಗೂ ತರಬೇತಿ ನಿಯಮಗಳಿಗೆ ಬದ್ಧನಾಗಿರುತ್ತೇನೆ.

ಭಾಗವಹಿಸುವ ಪ್ರತಿನಿಧಿಯ ಸಹಿ

ಮೇಲ್ಕಂಡಂತೆ ವಿವರವನ್ನು ಹೊಂದಿರುವ ನಮ್ಮ ಸಹಕಾರಿಯ ಪ್ರತಿನಿಧಿಗೆ ತರಬೇತಿಯಲ್ಲಿ ಭಾಗವಹಿಸಲು ಅವಕಾಶ ನೀಡಲು ಕೋರಿದೆ.